# ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ:ಗುವಿಸಕಂ/ಮುಅ(ಕಾ)/ಕಾ.ನಿ.ಅ(ನಿ.ವ್ಯ)/ಸ.ಕಾ.ನಿ.ಅ(ನಿ.ವ್ಯ)/ಪ್ರ.ಲೆ.ಅ(ನಿ.ವ್ಯ)2023–24/49669–74 ದಿನಾಂಕ: 11–01–2024

## ಅಧಿಸೂಚನೆ

ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052 ರವರ ಸಮ್ಮುಖದಲ್ಲಿ "ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ದರ) ಎಮ್.ವೈ.ಟಿ. ನಿಯಮಾವಳಿ–2000ರ ಹಾಗೂ 2006ರ ದಿನಾಂಕ: 31.05.2006 ನಿಯಮಾವಳಿಯ ಜೊತೆಗೆ ಓದಿಕೊಳ್ಳಲಾಗುವ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆ ಅಧಿನಿಯಮ 1999ರ ಪ್ರಕರಣ 27 ಹಾಗೂ ವಿದ್ಯುಚ್ಛಕ್ತಿ ಕಾಯ್ದೆ 2003ರ ಪರಿಚ್ಛೇದ 61 ಮತ್ತು 62ರ ಅಡಿಯಲ್ಲಿ ಆರ್ಥಿಕ ವರ್ಷ–23ರ ಟ್ರೋಯಿಂಗ್ ಅಪ್, ಆರ್ಥಿಕ ವರ್ಷ–2025ರ ವಿದ್ಯುತ್ ಸರಬರಾಜು ವ್ಯವಹರಣೆಗಾಗಿ ಶುಲ್ಕಗಳಿಂದ ನಿರೀಕ್ಷಿತ ಕಂದಾಯ (ಇ.ಆರ್.ಸಿ), ಆರ್ಥಿಕ ವರ್ಷ–25ಕ್ಕೆ ರೀಟೈಲ್ ವಿದ್ಯುತ್ ಸರಬರಾಜು ದರಗಳ ಅನುಮೋದನೆಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಗುವಿಸಕಂನಿ) ಕಲಬುರಗಿಯಿಂದ ಅರ್ಜಿ ಸಲ್ಲಿಸಿದೆ. ಗೌರವಾನ್ವಿತ ಆಯೋಗವು ಈ ಮನವಿಯನ್ನು ತಾಳೆ ನೋಡುವುದಕ್ಕೆ ಮತ್ತು ಸಿಂಧುಗೊಳಿಸುವುದಕ್ಕೆ ಒಳಪಟ್ಟು ದರ ನಿಯಮಗಳ ಪ್ರಕಾರ ಇದನ್ನು ಪೆಟಿಷನ್ (ಮನವಿ) ಎಂದು ಪರಿಗಣಿಸಿದೆ.

## ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಕಲಬುರಗಿ–585102

.......ಅರ್ಜಿದಾರರು

### ಅರ್ಜಿಯ ಸಾರಂಶ (ಸೂಚನೆ)

1. ಪರಿಷ್ಕರಣೆಯ ಅಗತ್ಯತೆ: ಪ್ರಸಕ್ತ ವಿದ್ಯುತ್ ದರಗಳಿಂದ ಗುವಿಸಕಂನಿ ಗಳಿಸುತ್ತಿರುವ ರೆವಿನ್ಯೂ ಸ್ವೀಕೃತಿ ಹಾಗೂ ವಾರ್ಷಿಕ ರೆವಿನ್ಯೂ ಅಗತ್ಯತೆಯ ನಡುವೆ ಸ್ವಾಮ್ಯತೆ ಇಲ್ಲದೆ ಪ್ರಯಕ್ತ ಕೆಳಕಂಡಂತೆ ರೆವಿನ್ಯೂ ಕೊರತೆ ಉಂಟಾಗಿದೆ. (ಕರ್ನಾಟಕ ಸರ್ಕಾರ ಸಬ್ಸಿಡಿ ಒಳಗೊಂಡಂತೆ).

| ಆರ್ಥಿಕ ವರ್ಷ | ರೆವಿನ್ಯೂ ಸ್ವೀಕೃತಿ ರೂ. ಕೋಟಿಗಳಲ್ಲಿ | ರೆವಿನ್ಯೂ ಅಗತ್ಯತೆ ರೂ. ಕೋಟಿಗಳಲ್ಲಿ | ಹೆಚ್ಚಳ/ (ಕೊರತೆ) ರೂ. ಕೋಟಿಗಳಲ್ಲಿ | ಮಾರಾಟ ದಶಲಕ್ಷ ಯುನಿಟಗಳಲ್ಲಿ | ವಿದ್ಯುತ್ ಸರಬರಾಜು ಸರಾಸರಿ ವೆಚ್ಚ (ಪ್ರತಿ ಯೂನಿಟ್‌ಗೆ) ರೂ.ಗಳಲ್ಲಿ |
|---|---|---|---|---|---|
| 1 | 2 | 3 | 4 | 5 | 6=(3/5) |
| **2022-23*** | **7341.61** | **7637.83** | **(296.22)** | **8440.51** | **9.05** |
| **2024-25**** | **8079.66** | **9672.92** | **(1,593.26)** | **9775.88** | **9.89** |

**ಸೂಚನೆ*** : ಆ.ವ.–23ರ ಆದಾಯವು ಪರಿಷ್ಕೃತ ಫೈನಾನ್ಸಿಯಲ್‌ಗಳ ಪ್ರಕಾರ ಕೆ.ಇ.ಆರ್.ಸಿ. ಪ್ರಾಥಮಿಕ ಅವಲೋಕನಗಳಿಗೆ ಪ್ರತ್ಯುತ್ತರಗಳಲ್ಲಿ ಸೂಚಿಸಲಾಗಿದೆ. (ಪುಟ ಸಂಖ್ಯೆ : 111)

**ಸೂಚನೆ**** : ಆ.ವ.–25ರ ಕಂದಾಯ ಕೊರತೆಯು ಆ.ವ.–23ರ ಕಂದಾಯ ಕೊರತೆಯನ್ನು ಒಳಗೊಂಡಿದೆ (ರೂ. 385.44 ಕೋಟಿಗಳು).

ಜಕಾತಿ ಅರ್ಜಿಯಿಂದ ವಸೂಲಾತಿಗಾಗಿ ಪ್ರಸ್ತಾಪಿಸಲಾದ ಒಟ್ಟು ಕೊರತೆ: ರೂ. 1593.26 ಕೋಟಿ ಮತ್ತು ಕಂದಾಯದ ಬೇಡಿಕೆಯನ್ನು ಹೆಚ್ಚುವರಿ ಮಾಹಿತಿಯಲ್ಲಿ ಒದಗಿಸಲಾಗಿದೆ.

1) ರೆವಿನ್ಯೂ ಸ್ವೀಕೃತಿಗಳನ್ನು (ಆದಾಯ) ಪ್ರಸ್ತುತ ಜಕಾತಿಯ ಪ್ರಕಾರ ಅಂದಾಜಿಸಲಾಗಿದೆ ಮತ್ತು ಪ್ರಸ್ತುತ ಜಕಾತಿಯಿಂದ ಆಗುವ ಕೊರತೆಯನ್ನು ತುಂಬಿಕೊಳ್ಳಲು ಸಾಧ್ಯವಿಲ್ಲವಾದುದರಿಂದ ನಿಗದಿತ ಶುಲ್ಕವನ್ನು ಹೆಚ್ಚಿಸಿ ವಿದ್ಯುತ್ ದರವನ್ನು ಕಡಿಮೆ/ಹೆಚ್ಚಳದ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಆರ್ಥಿಕ ವರ್ಷ–25ರ ವಾರ್ಷಿಕ ಕಾರ್ಯಕ್ಷಮತೆ ವರದಿಯಲ್ಲಿನ ಕೊರತೆ **ರೂ. 1593.26 ಕೋಟಿ** ಗಳನ್ನು ಎಲ್ಲಾ ಪ್ರವರ್ಗಗಳ ಬಳಕೆದಾರರಿಂದ ತುಂಬಿಕೊಳ್ಳಲು ಗು.ವಿ.ಸ.ಕಂ.ನಿ ಯು ಈ ದರ ಹೆಚ್ಚಳ ಪ್ರಸ್ತಾವನೆಯನ್ನು ಸಲ್ಲಿಸಿದೆ. 2) ವಿದ್ಯುತ್‌ದರ ಹೆಚ್ಚಳದ ಪ್ರಸ್ತಾವನೆ: ವಿವಿಧ ಪ್ರವರ್ಗದ ಗ್ರಾಹಕರಿಗೆ ವಿಧಿಸಲು ಉದ್ದೇಶಿಸಿರುವ ಪ್ರಸ್ತಾಪಿತ ನಿಗದಿತ ಶುಲ್ಕ ಮತ್ತು ವಿದ್ಯುತ್ ಬಳಕೆ ಶುಲ್ಕ ಹೆಚ್ಚಳದ ವಿವರವನ್ನು ಈ ಕೆಳಗಿನ ಅನುಬಂಧದಲ್ಲಿ ತೋರಿಸಲಾಗಿದೆ. 3) ಕವಿನಿ ಆಯೋಗ (ವಿದ್ಯುತ್‌ದರ) ನಿಬಂಧನೆಗಳು 2000ದ ನಿಯಮಾವಳಿ–5ರ ಅನುಸರಣೆಯಾಗಿ, ಮೇಲಿನ ಅರ್ಜಿದಾರರ ಮನವಿಯ ವಿರುದ್ಧ ಆಕ್ಷೇಪಣೆಯನ್ನು ಸಲ್ಲಿಸಲು ಇಚ್ಛಿಸುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಯನ್ನು 6 (ಆರು) ಪ್ರತಿಗಳಲ್ಲಿ, ಅಫಿಡವಿಟ್‌ನೊಂದಿಗೆ ಈ ಪ್ರಕಟಣೆಯ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಮೊದಲ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನದೊಳಗೆ ಸ್ವೀಕರಣಾಧಿಕಾರಿ, ಕಾರ್ಯದರ್ಶಿಯವರ ಕಚೇರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052 ಇವರಿಗೆ ಸಲ್ಲಿಸತಕ್ಕದ್ದು. ತಮ್ಮ ಆಕ್ಷೇಪಣೆ ಇದ್ದಲ್ಲಿ, ಸಾರ್ವಜನಿಕ ವಿಚಾರಣೆಯಲ್ಲಿ (Public Hearing) ವೈಯಕ್ತಿಕವಾಗಿ ಭಾಗವಹಿಸುವರೇ ಎಂಬುದನ್ನೂ ತಿಳಿಸತಕ್ಕದ್ದು. ಆಕ್ಷೇಪಣೆಗೆ ಉತ್ತರವನ್ನು ಒದಗಿಸುವುದಕ್ಕಾಗಿ ಆಕ್ಷೇಪಣೆಯ ಪ್ರತಿಯನ್ನು ಕಾರ್ಯನಿರ್ವಾಹಕ ಇಂಜಿನೀಯರ್ (ವಿ) (ನಿಯಂತ್ರಣ ವ್ಯವಹಾರ) ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ–585102 ರವರಿಗೆ ಸಲ್ಲಿಸಬಹುದಾಗಿದೆ. 4) ಆಸಕ್ತ ವ್ಯಕ್ತಿಗಳಿಗೆ ಪರಾಮರ್ಷೆಗಾಗಿ ಅರ್ಜಿದಾರರ ಮನವಿಯ ಪ್ರತಿಗಳು (Tariff Petition Booklet) ಕಾರ್ಯನಿರ್ವಾಹಕ ಇಂಜಿನೀಯರ್ (ವಿ) (ನಿಯಂತ್ರಣ ವ್ಯವಹಾರ) ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ –585102 ರಲ್ಲಿ ಮತ್ತು ಎಲ್ಲಾ ವೃತ್ತ ಕಛೇರಿಗಳಲ್ಲಿ ಅಧೀಕ್ಷಕ ಇಂಜಿನಿಯರು (ವಿ) (ಕಾ ಮತ್ತು ಪಾ), ಕಲಬುರಗಿ, ಬೀದರ್, ರಾಯಚೂರ, ಬಳ್ಳಾರಿ, ಕೊಪ್ಪಳದಲ್ಲಿ ದೊರಕುತ್ತವೆ. ಅರ್ಜಿದಾರರ ಮನವಿ ಹಾಗೂ ಸಂಬಂಧಿತ ದಾಖಲೆಗಳ ಪೂರ್ಣ ಪ್ರತಿಯನ್ನು ರೂ. 600/– ಮತ್ತು ಆಯೋಗದ ಅವಲೋಕನಕ್ಕೆ ಗು.ವಿ.ಸ.ಕಂ.ನಿಯು ಒದಗಿಸಿದ ಉತ್ತರ ಇವುಗಳನ್ನು ರೂ. 800/– ಒಟ್ಟು ರೂ. 1400/– ಪಾವತಿಸಿ ಪ್ರತಿಯನ್ನು ಖರೀದಿಸಬಹುದಾಗಿದೆ. 5) ಇ.ಆರ್.ಸಿ., ವಿದ್ಯುತ್ ದರ ಪರಿಷ್ಕರಣೆ ಅರ್ಜಿ, ಈ ಸಂಬಂಧವಾಗಿ ಆಯೋಗದ ಪೂರ್ವಭಾವಿ ಅವಲೋಕನ ಮತ್ತು ಆಯೋಗದ ಅವಲೋಕನಕ್ಕೆ ಗುವಿಸಕಂನಿಯು ಒದಗಿಸಿದ ಉತ್ತರ ಇವುಗಳನ್ನು ಜೆಸ್ಕಾಂ ವೆಬ್‌ಸೈಟ್ (http://gescom.karnataka.gov.in/) ದಿಂದಲೂ ಪಡೆಯಬಹುದಾಗಿದೆ ಅಥವಾ ಕಾರ್ಯನಿರ್ವಾಹಕ ಇಂಜಿನಿಯರ (ವಿ), (ನಿಯಂತ್ರಣ ವ್ಯವಹಾರ) ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ ರವರ ಕಛೇರಿಯಲ್ಲಿ ಸೂಕ್ತ ಶುಲ್ಕ ನೀಡಿ ಅವುಗಳ ಝೆರಾಕ್ಸ್ ಪ್ರತಿಗಳನ್ನು ಪಡೆದುಕೊಳ್ಳಬಹುದಾಗಿದೆ.

### ಅನುಬಂಧ

**ಅನುಬಂಧ: ಆ.ವ–24 ಪ್ರಸಕ್ತ ದರ ಮತ್ತು ಆ.ವ–25ರ ಪ್ರಸ್ತಾಪಿತ ದರಗಳ ವಿವರಗಳನ್ನು ತೋರಿಸುವ ಪಟ್ಟಿ**

| ಗ್ರಾಹಕರ ವರ್ಗೀಕರಣ | | ನಿಗದಿತ/ವಿದ್ಯುಚ್ಛಕ್ತಿ ದರ (ರೂ./ಯೂನಿಟ್) ಪ್ರಸ್ತುತ | ಪ್ರಸ್ತಾಪಿತ |
|---|---|---|---|
| **ಎಲ್ ಟಿ–1 ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ ಸ್ಥಾವರಗಳಿಗೆ:** | | | |
| ವಿದ್ಯುತ್ ಬಳಕೆ ಶುಲ್ಕ | 0–40 ಯುನಿಟ್‌ಗಳಿಗೆ | 8.75 | 11.13 |
| | ಮಾಸಿಕ ಕನಿಷ್ಠ ಶುಲ್ಕ | 100 | 100 |
| **ಎಲ್ ಟಿ–2(ಎ): ಗೃಹಬಳಕೆ** | | | |
| ನಿಗದಿತ ಶುಲ್ಕ/ಕಿ.ವ್ಯಾ/ ಮಾಸಿಕ | ಪ್ರತಿ ಕಿ.ವ್ಯಾ.ಗೆ ಪ್ರತಿ ತಿಂಗಳಿಗೆ 50 ಕಿ.ವ್ಯಾ.ನ್ನು ಒಳಗೊಂಡಂತೆ | 110 | 210 |
| | 50 ಕಿ.ವ್ಯಾ.ಗೆ ಮೀರಿದ ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ | 210 | 310 |
| **ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ** | 0–100 ಯೂನಿಟ್ಟುಗಳು | 4.75 | 5.75 |
| | 0 ರಿಂದ ಎಲ್ಲಾ ಯೂನಿಟ್ಟುಗಳು (ಒಟ್ಟು ಬಳಕೆಯ 100 ಯೂನಿಟ್ಟುಗಳನ್ನು ಮೀರಿದರೆ) | 7.00 | 8.00 |
| | ಗ್ರಾಮ ಪಂಚಾಯಿತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ | | |
| **ಎಲ್ ಟಿ–2 (ಬಿ): ಖಾಸಗಿ ವೃತ್ತಿಪರ/ ವಿದ್ಯಾಸಂಸ್ಥೆಗಳು** | | | |
| ನಿಗದಿತ ಶುಲ್ಕ/ಕಿ.ವ್ಯಾ/ ಮಾಸಿಕ | ಪ್ರತಿ ಕಿ.ವ್ಯಾ.ಗೆ ಪ್ರತಿ ತಿಂಗಳಿಗೆ 50 ಕಿ.ವ್ಯಾ.ನ್ನು ಒಳಗೊಂಡಂತೆ | 180 | 280 |
| | 50 ಕಿ.ವ್ಯಾ.ಗೆ ಮೀರಿದ ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ | 250 | 350 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 7.75 | 8.75 |
| | ಗ್ರಾಮ ಪಂಚಾಯಿತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ | | |
| **ಎಲ್ ಟಿ–3(ಎ): ವಾಣಿಜ್ಯ** | | | |
| ನಿಗದಿತ ಶುಲ್ಕ/ಕಿ.ವ್ಯಾ/ ಮಾಸಿಕ | ಪ್ರತಿ ಕಿ.ವ್ಯಾ.ಗೆ ಪ್ರತಿ ತಿಂಗಳಿಗೆ 50 ಕಿ.ವ್ಯಾ.ನ್ನು ಒಳಗೊಂಡಂತೆ | 200 | 300 |
| | 50 ಕಿ.ವ್ಯಾ.ಗೆ ಮೀರಿದ ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ | 300 | 400 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 8.50 | 8.00 |
| | ಗ್ರಾಮ ಪಂಚಾಯಿತಿಗಳ ಗ್ರಾಹಕರಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ | | |
| **ಎಲ್.ಟಿ.–3(ಬಿ): ಹೋರ್ಡಿಂಗ್ ಮತ್ತು ಜಾಹಿರಾತು ಫಲಕಗಳು** | | | |
| ನಿಗದಿತ ಶುಲ್ಕ/ಕಿ.ವ್ಯಾ/ ಮಾಸಿಕ | 67 ಎಚ್.ಪಿ. ಗಿಂತ ಕಡಿಮೆ | 200 | 300 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ | ಸಂಪೂರ್ಣ ಬಳಕೆಗಾಗಿ | 10.50 | 11.50 |
| **ಎಲ್ ಟಿ–4 (ಎ): ಐ.ಪಿ. ಸೆಟ್ಟುಗಳು–10 ಎಚ್.ಪಿ. ಮತ್ತು ಕಡಿಮೆ ಲೋಡ್** | | | |
| ನಿಗದಿತ ಶುಲ್ಕ/ ಎಚ್.ಪಿ./ಮಾಸಿಕ | 10 ಎಚ್.ಪಿ. ಗಿಂತ ಕಡಿಮೆ | – | 100 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ | ಸಂಪೂರ್ಣ ಬಳಕೆಗಾಗಿ | 7.22 | 8.22 |
| **ಎಲ್ ಟಿ–4 (ಬಿ): ಐ.ಪಿ. ಸೆಟ್ಟುಗಳು–10 ಎಚ್.ಪಿ.ಗಿಂತ ಅಧಿಕ ಲೋಡ್** | | | |
| ನಿಗದಿತ ಶುಲ್ಕ/ ಎಚ್.ಪಿ./ಮಾಸಿಕ | 10 ಎಚ್.ಪಿ. ಗಿಂತ ಅಧಿಕ | 135 | 235 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ | ಸಂಪೂರ್ಣ ಬಳಕೆಗಾಗಿ | 4.10 | 5.10 |
| **ಎಲ್ ಟಿ–4 (ಸಿ) : ಖಾಸಗಿ ತೋಟಗಾರಿಕೆ/ನರ್ಸರಿಗಳು** | | | |
| ನಿಗದಿತ ಶುಲ್ಕ/ ಎಚ್.ಪಿ./ಮಾಸಿಕ | ಪ್ರತಿ ಎಚ್.ಪಿ.ಗೆ | 135 | 235 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ | ಸಂಪೂರ್ಣ ಬಳಕೆಗಾಗಿ | 4.25 | 5.25 |
| **ಎಲ್ ಟಿ–5 : ಕೈಗಾರಿಕೆಗಳು** | | | |
| ನಿಗದಿತ ಶುಲ್ಕ/ ಎಚ್.ಪಿ./ಮಾಸಿಕ | 100 ಎಚ್.ಪಿ.ಗಿಂತೆ ಕಡಿಮೆ | 140 | 240 |
| | 100 ಎಚ್.ಪಿ ಮತ್ತು ಮೇಲ್ಪಟ್ಟು | 250 | 350 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ | 0–500 ಯೂನಿಟ್ಟುಗಳಿಗೆ | 6.10 | 5.60 |
| | 500 ಮೇಲ್ಪಟ್ಟ ಯೂನಿಟ್ಟುಗಳಿಗೆ | 7.10 | 6.60 |
| | ಗ್ರಾಮ ಪಂಚಾಯಿತಿಗಳ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 30 ಪೈಸೆ ರಿಯಾಯಿತಿ | | |
| **ಎಲ್ ಟಿ–6(ಎ): ನೀರು ಸರಬರಾಜು** | | | |
| ನಿಗದಿತ ಶುಲ್ಕ/ ಎಚ್.ಪಿ./ಮಾಸಿಕ | ಪ್ರತಿ ಎಚ್.ಪಿ.ಗೆ 67 ಎಚ್.ಪಿ ಒಳಗೊಂಡಂತೆ | 175 | 275 |
| | ಪ್ರತಿ ಎಚ್.ಪಿ.ಗೆ 67 ಎಚ್.ಪಿ ಗಿಂತ ಮೇಲ್ಪಟ್ಟು | 275 | 375 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ | ಸಂಪೂರ್ಣ ಬಳಕೆಗಾಗಿ | 5.50 | 6.50 |
| **ಎಲ್ ಟಿ–6(ಬಿ): ಸಾರ್ವಜನಿಕರ ಬೀದಿ ದೀಪ** | | | |
| ನಿಗದಿತ ಶುಲ್ಕ/ ಕಿ.ವ್ಯಾ/ಮಾಸಿಕ | ಪ್ರತಿ ಕಿ.ಲೋ ವ್ಯಾಟ್ ಗೆ | 175 | 275 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 7.00 | 8.00 |
| **ಎಲ್.ಟಿ–6 (ಸಿ): ವಿದ್ಯುತ್ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳು** | | | |
| ನಿಗದಿತ ಶುಲ್ಕ/ಕಿ.ವ್ಯಾ/ ಮಾಸಿಕ (ಎಲ್‌ಟಿ) | ಪ್ರತಿ ಕಿ.ವ್ಯಾ.ಗೆ ಪ್ರತಿ ತಿಂಗಳಿಗೆ 50 ಕಿ.ವ್ಯಾ.ನ್ನು ಒಳಗೊಂಡಂತೆ | 70 | 70 |
| | 50 ಕಿ.ವ್ಯಾ.ಗೆ ಮೀರಿದ ಪ್ರತಿ ಹೆಚ್ಚುವರಿ ಕಿ.ವ್ಯಾ.ಗೆ | 170 | 170 |
| ನಿಗದಿತ ಶುಲ್ಕ/ ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್ /ಮಾಸಿಕ | ಪ್ರತಿ ಕೆ.ವಿ.ಎ ಗೆ | 200 | 200 |
| ಬಳಕೆ ಶುಲ್ಕ/ತಿಂಗಳಿಗೆ/ (ಎಲ್‌ಟಿ/ಎಚ್‌ಟಿ) | ಸಂಪೂರ್ಣ ಬಳಕೆಗಾಗಿ | 4.50 | 4.50 |
| **ಎಲ್ ಟಿ–7: ತಾತ್ಕಾಲಿಕ ವಿದ್ಯುತ್ ಸರಬರಾಜು** | | | |
| ನಿಗದಿತ ಶುಲ್ಕ/ಕಿ.ವ್ಯಾ/ ಮಾಸಿಕ | ಪ್ರತಿ ಎಚ್.ಪಿ.ಗೆ 67 ಎಚ್.ಪಿ ಗಿಂತ ಕಡಿಮೆ | 200 | 300 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 11.50 | 12.50 |
| **ಎಚ್ ಟಿ–1: ನೀರು ಸರಬರಾಜು, ಚರಂಡಿ ನೀರು ಶುದ್ಧಿಕರಣ/ ಪಂಪಿಂಗ್ ಸ್ಥಾವರಗಳು** | | | |
| ನಿಗದಿತ ಶುಲ್ಕ/ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್ / ಮಾಸಿಕ | ಪ್ರತಿ ಕೆ.ವಿ.ಎ. ಗೆ | 350 | 450 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 6.00 | 7.00 |
| **ಎಚ್ ಟಿ–2 (ಎ): ಕೈಗಾರಿಕೆಗಳು** | | | |
| ನಿಗದಿತ ಶುಲ್ಕ/ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್/ ಮಾಸಿಕ | ಪ್ರತಿ ಕೆ.ವಿ.ಎ. ಗೆ | 350 | 450 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 7.40 | 6.90 |
| **ಎಚ್ ಟಿ–2 (ಎ): ರೈಲ್ವೆ ಟ್ರ್ಯಾಕ್ಸನ್ / ಮಲೀನ ನೀರು ಶುದ್ಧೀಕರಣ** | | | |
| ನಿಗದಿತ ಶುಲ್ಕ/ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್/ ಮಾಸಿಕ | ಪ್ರತಿ ಕೆ.ವಿ.ಎ. ಗೆ | 350 | 450 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 7.00 | 6.90 |
| **ಎಚ್ ಟಿ–2 (ಬಿ): ವಾಣಿಜ್ಯ** | | | |
| ನಿಗದಿತ ಶುಲ್ಕ/ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್/ ಮಾಸಿಕ | ಪ್ರತಿ ಕೆ.ವಿ.ಎ. ಗೆ | 375 | 475 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 9.25 | 8.75 |
| **ಎಚ್ ಟಿ–2 (ಸಿ)(i) : ಸರ್ಕಾರಿ/ಅನುದಾನಿತ/ದತ್ತಿ ವಿದ್ಯಾ ಸಂಸ್ಥೆಗಳು/ಆಸ್ಪತ್ರೆಗಳು** | | | |
| ನಿಗದಿತ ಶುಲ್ಕ/ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್/ ಮಾಸಿಕ | ಪ್ರತಿ ಕೆ.ವಿ.ಎ. ಗೆ | 300 | 400 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 7.50 | 7.00 |
| **ಎಚ್ ಟಿ–2(ಸಿ)(ii): ಎಚ್ ಟಿ–2(ಸಿ)(i)ಗೆ ಒಳಪಡದ ವಿದ್ಯಾ ಸಂಸ್ಥೆಗಳು/ಆಸ್ಪತ್ರೆಗಳು** | | | |
| ನಿಗದಿತ ಶುಲ್ಕ/ಕೆ.ವಿ.ಎ.ನ ಬಿಲ್ಲಿಂಗ್ ಡಿಮ್ಯಾಂಡ್/ಮಾಸಿಕ | ಪ್ರತಿ ಕೆ.ವಿ.ಎ. ಗೆ | 350 | 450 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 8.50 | 8.00 |
| **ಎಚ್ ಟಿ–3: ಏತ ನೀರಾವರಿ ಯೋಜನೆಗಳು** | | | |
| ನಿಗದಿತ ಶುಲ್ಕ/ಎಚ್.ಪಿ/ ಮಾಸಿಕ | ಪ್ರತಿ ಎಚ್.ಪಿ ಗೆ | 150 | 250 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 3.50 | 4.50 |
| **ಎಚ್ ಟಿ–4 : ವಸತಿ ಸಮುಚ್ಛಯಗಳು/ ಕಾಲೋನಿಗಳು** | | | |
| ನಿಗದಿತ ಶುಲ್ಕ/ಎಚ್.ಪಿ/ ಮಾಸಿಕ | ಪ್ರತಿ ಎಚ್.ಪಿ ಗೆ | 300 | 400 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 7.25 | 8.25 |
| **ಎಚ್.ಟಿ–5 : ಎಚ್.ಟಿ. ತಾತ್ಕಾಲಿಕ ವಿದ್ಯುತ್ ಸರಬರಾಜು 67 ಎಚ್.ಪಿ. & ಅಧಿಕ ಲೊಡ್** | | | |
| ನಿಗದಿತ ಶುಲ್ಕ/ಎಚ್.ಪಿ/ ಮಾಸಿಕ | ಪ್ರತಿ ಎಚ್.ಪಿ ಗೆ ಸಂಪೂರ್ಣ ಒಪ್ಪಿದ ಬೇಡಿಕೆಗೆ | 400 | 500 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 11.50 | 12.50 |
| **ಎಚ್.ಟಿ–6 : ಸರಕಾರಿ ಏತ ನೀರಾವರಿ ಯೋಜನೆಗಳು** | | | |
| ನಿಗದಿತ ಶುಲ್ಕ/ಎಚ್.ಪಿ/ ಮಾಸಿಕ | ಪ್ರತಿ ಎಚ್.ಪಿ ಗೆ ಮಂಜೂರಾದ ಲೋಡ್ | 150 | 250 |
| ವಿದ್ಯುತ್ ಬಳಕೆ ಶುಲ್ಕ/ ಯೂನಿಟ್‌ಗೆ/ತಿಂಗಳಿಗೆ | ಸಂಪೂರ್ಣ ಬಳಕೆಗಾಗಿ | 5.50 | 6.50 |

ಗ್ರಾಹಕರು (ಎಲ್.ಟಿ.–5, ಎಲ್.ಟಿ.–6(ಸಿ) ಹೆಚ್.ಟಿ, ಹೆಚ್‌ಟಿ–1, ಹೆಚ್‌ಟಿ–2 (ರೈಲ್ವೆ ಟ್ರೈಕ್ಸನ್ ಹೊರತುಪಡಿಸಿ) ಕೋರಿಕೆಯ ಮೇರೆಗೆ ಸಮಯಾಧಾರಿತ ವಿದ್ಯುತ್ ದರ (ಟಿ.ಒ.ಡಿ) ಸೌಲಭ್ಯ ಪಡೆಯಬಹುದು. ಗ್ರಾಹಕರು (ಎಲ್.ಟಿ.–3 ಮತ್ತು ಎಲ್.ಟಿ.–5) ಬೇಡಿಕೆ ಆಧಾರಿತ ವಿದ್ಯುಚ್ಛಕ್ತಿ ದರ ಐಚ್ಛಿಕದ (ಡಿಬಿಟಿ) ಸೌಲಭ್ಯ ಪಡೆಯಬಹುದು. ಸೂಚನೆ: ಮೇಲಿನ ಶುಲ್ಕಗಳೊಂದಿಗೆ ಸರ್ಕಾರ ವಿಧಿಸಿದ/ಸಮಯ ಸಮಯಕ್ಕೆ ವಿಧಿಸಬಹುದಾದ ವಿದ್ಯುತ್ ತೆರಿಗೆಯನ್ನು ಬಿಲ್ ಜೊತೆಗೆ ಪಾವತಿಸಬೇಕಾಗುತ್ತದೆ. ಹೆಚ್ಚಿನ ಪ್ರಸ್ತಾಪಿತ ವಿದ್ಯುತ್ ದರದ ಬಗ್ಗೆ ಜೆಸ್ಕಾಂ ವೆಬ್‌ಸೈಟ್ https://gescom.karnataka.gov.in/) ರಲ್ಲಿ ಮಾಹಿತಿಯನ್ನು ಪಡೆಯಬಹುದು.

**ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ (ವಿದ್ಯುತ್)**

**ನಿಯಂತ್ರಣ ವ್ಯವಹಾರ, ನಿಗಮ ಕಛೇರಿ, ಗು.ವಿ.ಸ.ಕಂ.ನಿ. ಕಲಬುರಗಿ–585102**

ವಾ.ಸಾ.ಸಂ.ಇ/ಕಲಬುರಗಿ/672/ಕೆ.ಎಸ್.ಎಂ.ಸಿ.&ಎ/2023–24